**ಮಗ:** ನಾನು ನೋಡಿದ ಆ ಹುಡುಗಿಗೆ ಅಡುಗೆ, ಸಂಗೀತ ಬರುತ್ತೆ. ನಾನು ಆಕೆಯನ್ನೇ ಮದುವೆಯಾಗ್ತೀನಮ್ಮ.
**ತಾಯಿ:** ಅವಳನ್ನು ನೀನು ಮದುವೆಯಾಗೋದು ಬೇಡ ಕಣೋ.
**ಮಗ:** ಏಕಮ್ಮಾ?
**ತಾಯಿ:** ಅವಳು ಕರಾಟೇನೂ ಕಲಿತಿದ್ದಾಳೆ.

***

**ಕಲಾವಿದ:** ಸಾರ್, ನಿಧನ ಹೊಂದಿರುವ ನಿಮ್ಮ ಮಡದಿಯ ಚಿತ್ರವನ್ನು ಜೀವಂತದಂತೆಯೇ ರಚಿಸಿಕೊಡುವೆ.
**ಆತ:** ಅದು ನಿಜವಾಗಲೂ ಜೀವಂತದಂತಿರುತ್ತಾ?
**ಕಲಾವಿದ:** ಹೌದು ಸಾರ್. ಅದರ ಬಗ್ಗೆ ನಿಮಗೆ ಅನುಮಾನವೇ ಬೇಡ?
**ಆತ:** ಹಾಗಾದ್ರೆ ಖಂಡಿತ ಬೇಡವೇ ಬೇಡ. ಸದ್ಯಕ್ಕೆ ನಾನೀಗ ನೆಮ್ಮದಿಯಾಗಿದ್ದೇನೆ!

***

**ಡಾಕ್ಟರ್:** ಕಾರ್ಮಿಕರೇ, ರೇಬಿಸ್‌ನಿಂದ ಆಗುವ ಅನಾಹುತದ ಬಗ್ಗೆ ಕೇಳಿದಿರಿ. ಈಗ ಹೇಳಿ, ರೇಬಿಸ್ ಬಂದರೆ ನೀವೇನು ಮಾಡ್ತೀರಿ?
**ಒಬ್ಬ:** ಮೊದಲು ನಮ್ಮ ಫ್ಯಾಕ್ಟರಿ ಯಜಮಾನನನ್ನೇ ಕಚ್ತೀನಿ ಸಾರ್.

***

**ಪತ್ನಿ:** ಅಲ್ಲ ರೀ... ಯಾವಾಗಲೂ ಅಡುಗೆ ಮಾಡ್ತಾನೇ ಇದ್ರೆ ಅಕ್ಕಪಕ್ಕದ ಮನೆಯವ್ರು ನನ್ನ ಮನೆಕೆಲಸದವಳು ಅಂತ ಅಂದುಕೊಳ್ಳೋದಿಲ್ವಾ?
**ಪತಿ:** ಹಾಗೇನಿಲ್ಲ. ಅವರೇನಾದರೂ ನೀನು ಮಾಡಿದ ಅಡುಗೆ ಊಟ ಮಾಡಿದ್ರೆ, ತಾವು ನಿಜಕ್ಕೂ ತಪ್ಪು ತಿಳ್ಕೊಂಡಿದ್ದೆವು ಅನ್ನೋ ತೀರ್ಮಾನಕ್ಕೆ ಬಂದೇ ಬರ್ತಾರೆ.

***

**ಪತ್ನಿ:** ರೀ... ನಾನು ಕಷ್ಟಪಟ್ಟು ರುಚಿಯಾಗಿ ಅಡುಗೆ ಮಾಡಿ ಹಾಕಿದ್ರೂ ಒಂದು ದಿನಾನೂ ಒಂದೇ ಒಂದು ಉಡುಗೊರೆ ಕೊಡಿಸಿಲ್ಲ. ಯಾಕೆ?
**ಪತಿ:** ನೀನು ಅಡುಗೆ ಮಾಡಲು ಶುರು ಮಾಡಿದ ದಿನವೇ ನಾನು ಇನ್‌ಶ್ಯುರೆನ್ಸ್ ಮಾಡಿಸಿದ್ದೀನಿ!

***

**ಶ್ವೇತಾ:** ಚಂದ್ರಿಕಾ, ಇತ್ತೀಚೆಗೆ ನನ್ನ ಬ್ಯೂಟಿ ಕಡಿಮೆ ಆಗ್ತಿದೆ ಅಂತ ಫೀಲ್ ಆಗ್ತಿದೆ ಕಣೆ.
**ಚಂದ್ರಿಕಾ:** ಹೌದಾ? ಅದ್ಹೇಗೆ ಹೇಳ್ತೀಯಾ?
**ಶ್ವೇತಾ:** ಮೊದ್ಲೆಲ್ಲ, ಹಣ ಕೊಟ್ಟ ತಕ್ಷಣ ಅದನ್ನು ಎಣಿಸಿಕೊಳ್ಳದೆ ಬ್ಯಾಂಕ್ ಕ್ಯಾಷಿಯರ್ ಎತ್ತಿಟ್ಟುಕೊಳ್ಳುತ್ತಿದ್ದರು. ಈಗ ಪಕ್ಕಕ್ಕೆ ತಿರುಗಿಕೊಂಡು ಹಣ ಎಣಿಸ್ತಾರೆ.

**ಅಶೋಕ:** ಕೃಷ್ಣ ಎಲ್ಲಿ ನಿನ್ನ ಹೊಸ ನಾಯಿ ಕಾಣ್ತಿಲ್ಲ.
**ಕೃಷ್ಣ:** ಮಾರಿಬಿಟ್ಟೆ ಕಣೊ.
**ಅಶೋಕ:** ಏಕೋ ಇಷ್ಟ ಬೇಗ ಮಾರಿದೆ?
**ಕೃಷ್ಣ:** ಇನ್ನೇನ್ ಮಾಡ್ಲಿ... ನನ್ನ ಹೆಂಡ್ತಿ ಕಡೆಯವರು ಬಂದಾಗ, ಬಾಲ ಆಡಿಸಿಕೊಂಡಿರುತ್ತಿತ್ತು. ಆದರೆ, ನನ್ನ ಕಡೆಯವರು ಬಂದಾಕ್ಷಣ ಜೋರಾಗಿ ಬೊಗಳ್ತಿತ್ತು. ಅದ್ಕೆ ಮಾರಿಬಿಟ್ಟೆ.

***

**ರಾಜು:** ಕೇಶವ, ಪ್ರೀತಿ ಅಂದರೆ ನಿನ್ನದು ಕಣೋ, ತವರೂರಿನಲ್ಲಿರುವ ನಿನ್ನ ಹೆಂಡತಿಗೆ ಒಂದು ದಿನವೂ ತಪ್ಪಿಸದೆ ಫೋನ್ ಮಾಡ್ತೀಯ. ಭೇಷ್ ಕಣೋ.
**ಕೇಶವ:** ಹಾಗೇನಿಲ್ಲ ರಾಜು. ನಿತ್ಯ ಫೋನ್ ಮಾಡದೇ ಹೋದರೆ ಮಾರನೇ ದಿನವೇ ನೀನಿದ್ದಲ್ಲಿಗೆ ಬಂದ್ಬಿಡ್ತೀನಿ ಅಂತ ಹೇಳಿದಾಳೆ. ಅದಕ್ಕೆ ದಿನಾ ಫೋನ್ ಮಾಡ್ತೀನಿ.

***

**ನಾಣಿ:** ಚಂದ್ರು, ನಿನ್ನ ಗೆಳೆಯ ಕಿಟ್ಟು ನರಕ ಅಂತ ಹೇಳ್ತೋದೆಲ್ಲ ಬರೀ ಸುಳ್ಳು ಅಂತ ಹೇಳ್ತಾನೆ.
**ಚಂದ್ರು:** ಹೇಳ್ಲಿ ಬಿಡು, ಅವನಿಗೆ ಮದುವೆಯಾದ ಮೇಲೆ ಎಲ್ಲ ಗೊತ್ತಾಗುತ್ತೆ.

***




ನೀವು ಪಕ್ಷದ ಸಚೇತಕರು ಅಷ್ಟೇ...ಅಭ್ಯರ್ಥಿ ಅಲ್ಲ..! ಪಕ್ಷಕ್ಕೆ ಮತ ಯಾಚನೆ ಮಾಡಿ!

**ಸುದರ್ಶನ:** ಮೂರ್ತಿ, ನಿನ್ನೆ ನಾನು ಹೇಳಿದ ಮಾತಲ್ಲಿ ಯಾವ ಹಾಸ್ಯವೂ ಇರಲಿಲ್ಲ. ಆದರೂ ಎಲ್ಲರೂ ನಗುವಂತೆ ಮಾಡಿದೆ ಅಂದೆ. ಹೇಗೆ?
**ಮೂರ್ತಿ:** ಓ, ಅದಾ! ನನ್ನ ಈ ಹಾಸ್ಯದ ಮಾತು ಬುದ್ಧಿವಂತರಿಗೆ ಮಾತ್ರವೇ ಅರ್ಥ ಆಗೋದು ಅಂದೆ ಅಷ್ಟೆ.

***

**ರಘು:** ಆನಂದ, ನಿಮ್ಮ ಪಕ್ಕದ ಮನೆ ಅವಿವಾಹಿತೆ ಆತ್ಮಹತ್ಯೆ ಮಾಡಿಕೊಳ್ಳಲು ಕಾರಣವೇನು?
**ಆನಂದ:** 'ಮದುವೆ ಸ್ವರ್ಗದಲ್ಲಿ ಏರ್ಪಾಡಾಗುತ್ತದೆ' ಅಂತ ಯಾರೋ ಹೇಳಿದ್ರಂತೆ. ಅದ್ಕೆ ಆತ್ಮಹತ್ಯೆ ಮಾಡಿಕೊಂಡ್ರು.

***

**ಸಂಪಾದಕ:** ರೀ... ನೀವು ಅವರ ಕಾದಂಬರಿಯ ವಸ್ತುವನ್ನು ಕದ್ದು ಈ ಸಣ್ಣ ಕತೆ ಬರೆದು ಕಳಿಸಿದ್ದೀರಲ್ಲ. ಇದು ಸರಿಯೇ?
**ಆತ:** ಏಕೆ ಸರಿಯಿಲ್ಲ ಸಾರ್. ಒಂದು ಸಣ್ಣ ಕಥೆಗಾಗುವಷ್ಟು ಕಂಟೆಂಟ್ ಇದ್ದದ್ದನ್ನು 500 ಪುಟಗಳಷ್ಟು ಹಿಗ್ಗಿಸಿ ಕಾದಂಬರಿ ಮಾಡಿದ್ದಾರೆ. ಅದಕ್ಕೆ ನಾನು ಹಾಗೆ ಮಾಡಿದೆ.

**ಅರವಿಂದ:** ಕಿಟ್ಟು ನೀನು ಸಾಹಿತಿಯಾಗಿ, ಸಿನಿಮಾ ನಟಿಯನ್ನು ಮದುವೆಯಾದರೂ ನಿರಂತರವಾಗಿ ಪ್ರೇಮ ಕಥೆಗಳನ್ನೇ ಬರೀತಾ ಇರ್ತೀಯಲ್ಲ. ಅದಕ್ಕೆ ಕಂಟೆಂಟ್ ಎಲ್ಲಿ ಸಿಗುತ್ತೆ?
**ಕಿಟ್ಟು:** ಓಹ್, ಅದಾ. ನನ್ನಾಕೆಯ ಡೈರಿ ಸಿಕ್ತು. ಅದರಲ್ಲಿ ಬರೀ ಕಥೆಯಲ್ಲ, ಕಾದಂಬರಿ ಬರೆಯಬಹುದಾದಷ್ಟು ವಸ್ತು ಇದೆ.

***

**ಹೋಟೇಲ್ ಮಾಲೀಕ:** ನಾಣಿ, ಹೊಸ ಅಡುಗೆಯವನ ಮೇಲೆ ಸ್ವಲ್ಪ ನಿಗಾ ಇರಲಿ!
**ನಾಣಿ:** ಏಕೆ ಸಾರ್?
ಹೋಟೇಲ್ ಮಾಲೀಕ: ಅವನು ತರಕಾರಿಗಳನ್ನು ಕತ್ತರಿಸಿದ ಮೇಲೆ ಚಾಕುವನ್ನು ಬಟ್ಟೆಯಿಂದ ಚೆನ್ನಾಗಿ ಒರೆಸಿ ಇಡ್ತಾ ಇರ್ತಾನೆ!

***

**ಆತ:** ಸಾರ್ ಪತ್ರಿಕಾಲಯದ ಎಲ್ಲ ವಿಭಾಗಗಳ ಮುಖ್ಯಸ್ಥರನ್ನು ಪರಿಚಯಿಸಿದಿರಿ, ಆದರೆ ಐಸ್ ಕ್ರೀಂ ಚೀಪುತ್ತಾ ಬಹಳ ಸಂತೋಷವಾಗಿ ಏನೋ ನೋಡ್ತಾ ಕುಳಿತಿದ್ದಾರಲ್ಲ ಅವರು ಯಾವ ವಿಭಾಗ?
**ಸಂಪಾದಕ:** ಓ ಅವರಾ! ಅದು ಬಾಲ ಜಗತ್ತು!

***

***

**ನಳಿನಿ:** ನನ್ನನ್ನು ಮದುವೆಯಾಗೋದಿಲ್ಲ ಅಂದ ಮೇಲೆ ನಾನು ನಿಮಗೆ ಬರೆದ ಪ್ರೇಮ ಪತ್ರಗಳನ್ನು ವಾಪಸ್ಸು ಕೊಟ್ಟುಬಿಡಿ.
**ರಾಘು:** ಏಕೆ? ನಾನು ಬ್ಲಾಕ್‌ಮೇಲ್ ಮಾಡ್ತೀನಿ ಅಂತ ಭಯಾನಾ?
**ನಳಿನಿ:** ಹಾಗೇನಲ್ಲ, ಈ ಪ್ರೇಮ ಪತ್ರಗಳನ್ನು ಹೊಸ ಪ್ರೇಮಿಗೆ ಕಳಿಸಿಕೊಡಬಹುದಲ್ಲ!

***

**ನಳಿನಿ:** ರೀ... ನೀವು ಮೊದಲು ಊಟ ಮಾಡುವಾಗ ನನಗೂ ತಿನ್ನಿಸ್ತಿದ್ರಿ. ಈಗ ಅದೆಲ್ಲವನ್ನೂ ಬಿಟ್ಟುಬಿಟ್ಟಿದ್ದೀರಲ್ವಾ?
**ರಾಘು:** ಅದಾ... ಈಗ ನೀನು ಬಹಳ ರುಚಿಯಾಗಿ ಅಡುಗೆ ಮಾಡೋದನ್ನ ಕಲಿತಿದ್ದೀಯ. ಅದ್ಕೆ ತಿನ್ನಿಸೋದಿಲ್ಲ ನಳಿನಿ.

***

**ಪತಿ:** ಲಲಿತಾ, ನಾನು ಮೂವತ್ತು ವರ್ಷ ಚಿಕ್ಕವನಾಗುವ ಸಾಧ್ಯತೆ ಇದ್ದಿದ್ದರೆ ಏನು ಮಾಡ್ತಾ ಇದ್ದೆ ಗೊತ್ತಾ?
**ಲಲಿತಾ:** ಗೊತ್ತು ರೀ. ನನ್ನ ಹಿಂದೆ ಅಲೆಯುತ್ತಾ ಆಗಾಗ ಬೈಸಿಕೊಳ್ತಾ ಇದ್ರಿ!

**ಸಂಗ್ರಹ: ಶಂಕರೇಗೌಡ ತುಂಬಕೆರೆ, ಮಂಡ್ಯ**